ಅ) 1947ರ ಜಲ ಕಾಯ್ದೆ ಕೇಂದ್ರ ಕಾಯ್ದೆಯಾಗಿದ್ದು ಅದರನ್ವಯ ಅದನ್ನು ರಾಜ್ಯ ಅಳವಡಿಸಿದ್ದು, ಪರವಾನಿಗೆ ಪಡೆಯುವುದು ಶಾಸನಬದ್ಧ ಕರ್ತವ್ಯವಾಗಿರುವುದರಿಂದ ಇದನ್ನು ಮನ್ನಾ ಮಾಡಲು ಸಾಧ್ಯವಿಲ್ಲ.

ಕೊಡಗಿನಲ್ಲಿ ಅರಣ್ಯ ಇಲಾಖೆ ಮರಗಳ ಕಳ್ಳ ಸಾಗಾಣಿಕೆ ವಾಹನಗಳ ಮುಟ್ಟುಗೋಲು.

300 (695) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ):

ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಕೊಡಗಿನಲ್ಲಿ ಅರಣ್ಯ ಇಲಾಖೆಯಲ್ಲಿ ಶ್ರೀಗಂಧ ಹಾಗು ಬೀಟೆ ಮರಗಳ ಕಳ್ಳ ಸಾಗಾಣಿಕೆ ಮಾಡುವಾಗ ಸಿಕ್ಕಿಬಿದ್ದ ವಾಹನ ಕಾರು, ಜೀಪು ಇತ್ಯಾದಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿದೆಯೇ;

ಆ) ಈ ರೀತಿ ಮುಟ್ಟುಗೋಲು ಹಾಕಿ ಕೊಂಡ ವಾಹನಗಳ ಸಂಖ್ಯೆ ಎಷ್ಟು;

ಇ) ಹರಾಜು ಮಾಡಿ ಸರ್ಕಾರಕ್ಕೆ ಬಂದ ಹಣ ಎಷ್ಟು? (ವಿವರ ಕೊಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು.

ಅ) ಹೌದು

ಆ) ಒಂದು

ಇ) ಒಂದು ಲಾರಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು ಅದನ್ನು ಹರಾಜು ಮಾಡಲಾಗಿ ಸರ್ಕಾರಕ್ಕೆ ಒಂದು ಲಕ್ಷ ರೂಪಾಯಿ ಆದಾಯ ಬಂದಿರುತ್ತದೆ.

ಕೊಡಗಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು.

301 (693) ಶ್ರೀ ಅಪ್ಪಚ್ಚು ರಂಜನ್,ಎಂ.ಪಿ.(ಸೋಮವಾರ ಪೇಟೆ):

ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷದಿಂದಲೂ ಕೊಡಗಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡದಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ।।ಹೆಚ್.ಸಿ.ಮಹದೇವಪ್ಪ ಮಾನ್ಯ ಆರೋಗ್ಯ ಮತ್ತು ಕುಕ.ಸಚಿವರು

ಅ) ನಿಜವಲ್ಲ.

ಆ) 1996ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು 9 ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಯಿತು. ಆದರೆ, ಕೇವಲ ಇಬ್ಬರು ವೈದ್ಯರು ಮಾತ್ರ ಕರ್ತವ್ಯಕ್ಕೆ ಹಾಜರಿಯಾದರು.

ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ಈಗಾಗಲೇ 400 ವೈದ್ಯರುಗಳನ್ನು ಆಯ್ಕೆ

ಮಾಡಲಾಗಿದೆ. ಆಯ್ಕೆ ಪಟ್ಟಿ ಸರ್ಕಾರಕ್ಕೆ ಬಂದ ನಂತರ ವೈದ್ಯರಿಗೆ ನೇಮಕಾತಿ ಆದೇಶವನ್ನು ನೀಡುವ ಸಮಯದಲ್ಲಿ ಕೊಡಗು ಜಿಲ್ಲೆಯಲ್ಲಿರುವ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ಮೆದುಳು ಜ್ವರದ ಬಗ್ಗೆ.

303 (450) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು ಕ್ಷೇತ್ರ):

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಳ್ಳಾರಿ ಜಿಲ್ಲೆಯಲ್ಲಿ 1995-96 ಮತ್ತು 1996-97 ಹಾಗೂ ಜನವರಿ 97 ರವರೆಗೆ ವರದಿಯಾದ ಮೆದುಳು ಜ್ವರದ ಪ್ರಕರಣಗಳೆಷ್ಟು;

2. ಮೇಲಿನ ಅವಧಿಯಲ್ಲಿ ಈ ರೋಗದಿಂದ ಮೃತಪಟ್ಟಿದವರ ಸಂಖ್ಯೆ ಎಷ್ಟು;

3. ಈ ರೋಗ ಹರಡಲು ಕಾರಣಗಳೇನು;

4. ಬಳ್ಳಾರಿ ಜಿಲ್ಲೆಯಲ್ಲಿ ಈ ರೋಗವನ್ನು ತಡೆಗಟ್ಟಲು ಸರ್ಕಾರವು ಹಮ್ಮಿಕೊಂಡ ಕಾರ್ಯಕ್ರಮಗಳೇನು?

ಡಾ।।ಹೆಚ್.ಪಿ.ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

1. ಬಳ್ಳಾರಿ ಜಿಲ್ಲೆಯಲ್ಲಿ 1995, 1996 ಮತ್ತು ಜನವರಿ 97 ರವರೆಗೆ ವರದಿಯಾದ ಮೆದುಳು ಜ್ವರದ ಪ್ರಕರಣಗಳು ಈ ಕೆಳಕಂಡಂತಿವೆ:

ವರ್ಷ	ವರದಿಯಾದ ಮೆದುಳು ಜ್ವರದ ಪ್ರಕರಣಗಳು	
	ಸಂಶಯಾಸ್ಪದ	ದೃಢಪಟ್ಟಿದ್ದು
1995	123	52
1996	37	9
1997 (ಜನವರಿ)	2	1

2. ಮೆದುಳು ಜ್ವರದ ಸಂಶಯಾಸ್ಪದ ಸಾವುಗಳ ಸಂಖ್ಯೆ ಈ ಕೆಳಕಂಡಂತಿವೆ:

ವರ್ಷ	ವರದಿಯಾದ ಮೆದುಳು ಜ್ವರದ ಪ್ರಕರಣಗಳು	
	ಸಂಶಯಾಸ್ಪದ	ದೃಢಪಟ್ಟಿದ್ದು
1995	28	-
1996	3	-
1997(ಜನವರಿ)	-	-